ಅನಧಿಕೃತವಾಗಿ ಎರಡು ಆಸ್ಪತ್ರೆಗಳು ಈ ರಾಜ್ಯದಲ್ಲಿ ಪ್ರಾರಂಭವಾಗಿದ್ದರೆ ಅದನ್ನು ಇಲ್ಲಿ ಕೇಳಬಾರದೆ? ನಮ್ಮ ಆಸ್ಪತ್ರೆಯಿಂದ ಕೂಡ ಒಬ್ಬ ಡಾಕ್ಟರ್ ಕೊಟ್ಟಿದ್ದೇವೆ. 15 ದಿವಸಗಳ ಮೊದಲೇ ಪ್ರಶ್ನೆಯನ್ನು ಕೊಟ್ಟಿರುತ್ತೇವೆ. ಆದ್ದರಿಂದ ಅವರು ಉತ್ತರ ಹೇಳಬೇಕಲ್ಲವೆ?

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಈಗ ನನ್ನ ಹತ್ತಿರ ಸಂಬಂಧಪಟ್ಟಂಥ ಮಾಹಿತಿಗಳು ಇಲ್ಲ. ಆದ್ದರಿಂದ, ಇವುಗಳನ್ನು ತರಿಸಿಕೊಡುತ್ತೇನೆಂದು ಹೇಳುತ್ತಿದ್ದಾರೆ. ಅವರೂ ಸಹ ಹೊಸಬರಿದ್ದಾರೆ. ಅವರು ಯಾವುದೇ ಮಾಹಿತಿಗಳು ಇಲ್ಲದೆ ಇರುವಾಗ ಅವರು ಏನೇ ಪ್ರಶ್ನೆ ಕೇಳಿದರೂ ಕೂಡ ಮಾನ್ಯ ಮಂತ್ರಿಗಳು ಅಷ್ಟೇ ಉತ್ತರ ಹೇಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳ ಜೊತೆ ಕುಳಿತುಕೊಂಡು ಚರ್ಚೆ ಮಾಡಿ. ಅವರು ಈಗಾಗಲೇ ಹೇಳಿದಂತೆ ಈ ವ್ಯವಸ್ಥೆ, ಅವ್ಯವಸ್ಥೆ ಆಗಿರತಕ್ಕಂಥದ್ದು ನಿಜ. ಇದು ಎಲ್ಲಾ ಕಾಲದಿಂದಲೂ ಕೂಡ ನಡೆದುಕೊಂಡು ಬಂದಿದೆ. ಅದಕ್ಕೆ ಏನಾದರೊಂದು ಸಮಗ್ರವಾದ ನೀತಿಯನ್ನು ರೂಪಿಸಿ ಎಂದು ನಾನೇ ಹೇಳುತ್ತಿದ್ದೇನೆ.

ವಿಷಯ: ಯಳಂದೂರು ತಾಲ್ಲೂಕು ಗೌಡಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡದ ಕೊರತೆ.

40 (211) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯಳಂದೂರು ತಾಲ್ಲೂಕು ಗೌಡಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮವೇನು ಹಾಗೂ ಕಟ್ಟಡ ಕಟ್ಟಲು ಯಾವ ಯೋಜನೆ ರೂಪಿಸಲಾಗಿದೆ;

ಇ) ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ ನಂತರವೂ ಮೊದಲಿದ್ದ ಸಂಖ್ಯೆಯ ವೈದ್ಯರು ಮತ್ತು ಸಿಬ್ಬಂದಿ ವರ್ಗದವರೇ ಕಾರ್ಯನಿರ್ವಹಿಸುತ್ತಿರಲು ಕಾರಣಗಳೇನು;

ಈ) ಇವರ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರಕ್ಕೆ ಒತ್ತಾಯ ಬಂದಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಕಟ್ಟಡವನ್ನು ಕಟ್ಟಲು ನಿವೇಶನ ಲಭ್ಯತೆ ಇರುವುದಿಲ್ಲ. ನಿವೇಶನ ದೊರಕಿದ ನಂತರ ಕಟ್ಟಡ ಕಟ್ಟಲು ಪ್ರಸ್ತಾಪಿಸಲಾಗುವುದು.

ಇ) ವೈದ್ಯರು ಮತ್ತು ಸಿಬ್ಬಂದಿಗಳ ಹೆಚ್ಚುವರಿ ಮಂಜೂರಾತಿಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು, ಸದ್ಯದಲ್ಲಿಯೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ಈ) ಬಂದಿದೆ.

ಉ) ವೈದ್ಯರು ಮತ್ತು ಸಿಬ್ಬಂದಿಗಳ ಹೆಚ್ಚುವರಿ ಮಂಜೂರಾತಿಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು, ಸದ್ಯದಲ್ಲಿಯೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ಎಸ್. ಬಾಲರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಯಳಂದೂರು ತಾಲ್ಲೂಕು ಗೌಡಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡದ ಕೊರತೆ ಇರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಕಳೆದ ಸಾರಿ ನಾನು ಕೂಡ ಸಂಬಂಧಪಟ್ಟಂಥ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಇದಕ್ಕೆ ನಿವೇಶನವನ್ನು ಕೊಟ್ಟಿದ್ದೇವೆ. ಆದರೆ, ಉತ್ತರದಲ್ಲಿ ಬಂದಿಲ್ಲವೆಂದು ಏಕೆ ಈ ರೀತಿಯಾಗಿ ಉತ್ತರ ಕೊಟ್ಟಿದ್ದಾರೆಯೋ ಗೊತ್ತಿಲ್ಲ. ಅಂದರೆ ನಿವೇಶನ ಇಲ್ಲ ಎನ್ನತಕ್ಕಂಥ ಪ್ರಶ್ನೆ ಏತಕ್ಕಾಗಿ ಉದ್ಭವವಾಗುತ್ತದೆ? ನಿವೇಶನ ಕೊಟ್ಟಿದ್ದರೆ ಈ ಸಾಲಿನಲ್ಲಿ ಕಟ್ಟಡ ಕಟ್ಟಿಕೊಡುತ್ತೀರಾ?

ಶ್ರೀ ಆರ್. ಅಶೋಕ್ : ನಿವೇಶನ ಕೊಟ್ಟರೆ ಈ ಸಾಲಿನಲ್ಲಿಯೇ ಸದರಿ ಕಟ್ಟಡವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್. ಬಾಲರಾಜ್ : ಮಾನ್ಯ ಸಚಿವರೆ, ಈಗಾಗಲೇ ನಿವೇಶನ ಕೊಡಲಾಗಿದೆ.

ಶ್ರೀ ಆರ್. ಅಶೋಕ್ : ನಿವೇಶನ ಕೊಟ್ಟಿರುವ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎಸ್. ಬಾಲರಾಜ್ : ಇದನ್ನು ನೋಡಿದರೆ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಪ್ರಶ್ನೆ ಬರುತ್ತದೆ.

ಶ್ರೀ ಆರ್. ಅಶೋಕ್ : ನಿವೇಶನ ಕೊಟ್ಟರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಾಡಿಕೊಡುತ್ತೀರಾ ಎಂದು ತಾವು ಕೇಳುತ್ತಿದ್ದೀರಿ. ಖಂಡಿತ ಮಾಡಿಕೊಡುತ್ತೇವೆ.

ಶ್ರೀ ಎಸ್. ಬಾಲರಾಜ್ : ಈ ಸಾಲಿನಲ್ಲಿಯೇ ಮಾಡಿಕೊಡುತ್ತೀರಾ?

ಶ್ರೀ ಆರ್. ಅಶೋಕ್ : ಮಾಡಿಕೊಡುತ್ತೇವೆ.

ಶ್ರೀ ಎಸ್. ಬಾಲರಾಜ್ : ನನ್ನ ಎರಡನೇ ಪ್ರಶ್ನೆಯಲ್ಲಿ ಕೊಳ್ಳೇಗಾಲದಲ್ಲಿರುವ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆ ಎಂದು ಹೇಳಿದ್ದಾರೆ. ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವಾಗ ಅಲ್ಲಿ ಕೇವಲ 8 ವೈದ್ಯರು ಮಾತ್ರ ಇದ್ದಾರೆ. ಅಂದರೆ ಹಿಂದೆ 60 ಬೆಡ್ ಇದ್ದಂಥ ಕಾಲದಲ್ಲಿ ಇದ್ದ 8 ವೈದ್ಯರು ಇವತ್ತೂ ಕೂಡ ಇದ್ದಾರೆ. ಸರ್ಕಾರದ ಆರ್ಥಿಕ ಸಮೀಕ್ಷೆ ಪುಸ್ತಕದಲ್ಲಿ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ 10,260 ಜನಸಂಖ್ಯೆಗೆ ಒಬ್ಬರು ವೈದ್ಯರು ಎಂದು ಅನುಪಾತದಲ್ಲಿ ಕೊಟ್ಟಿದ್ದಾರೆ. ಇರತಕ್ಕಂಥ ಅಂಕಿ-ಅಂಶಗಳ ಪ್ರಕಾರ ಸುಮಾರು 19 ಜನ ವೈದ್ಯರು ನಮ್ಮಲ್ಲಿರಬೇಕು. ಅಷ್ಟು ಜನಸಂಖ್ಯೆ ಇದ್ದರೂ ಕೂಡ 8 ಜನ ವೈದ್ಯರನ್ನು ಮಾತ್ರ ಕೊಟ್ಟಿದ್ದೀರಿ. ಆದ್ದರಿಂದ ಇರತಕ್ಕಂಥ ಅನುಪಾತದ ಪ್ರಕಾರ ಮುಂದಕ್ಕಾದರೂ ಮಾಡಿಕೊಡುತ್ತೀರಾ? ಇದನ್ನು ಮಾಡುವುದಕ್ಕೆ ನಿಮ್ಮಲ್ಲಿ ಸಾಧ್ಯತೆ ಇದೆಯೆ?

ಶ್ರೀ ಆರ್. ಅಶೋಕ್ : ರಾಜ್ಯದಲ್ಲಿ ಸುಮಾರು 596 ವೈದ್ಯರ ಕೊರತೆ ಇದೆ. ಇದರ ಜೊತೆಗೆ ಸುಮಾರು 73 ದಂತ ವೈದ್ಯರ ಕೊರತೆ ಕೂಡ ಇದೆ. ಏನು ಈಗಾಗಲೇ ಇರತಕ್ಕಂಥ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ್ದು, ಇಲ್ಲಿಗೆ ಅವಶ್ಯಕತೆ ಇರತಕ್ಕಂಥ ವೈದ್ಯರನ್ನು ಟೆಂಪರರಿ ಬೇಸಿಸ್ ಮೇಲೆ ನೇಮಕಾತಿ ಮಾಡಿಕೊಳ್ಳುವುದಕ್ಕೋಸ್ಕರ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮತ್ತು ನಮ್ಮ ಡಿಹೆಚ್‌ಓಗಳಿಗೆ ಸೂಚನೆ ನೀಡಿದ್ದೇವೆ. ಈಗಾಗಲೇ ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ್ದು, ಹಂತ ಹಂತವಾಗಿ ವೈದ್ಯರನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್. ಬಾಲರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಹೇಳಿರತಕ್ಕಂಥ ಉತ್ತರ ಸರಿಯಾದುದಲ್ಲ. ನಾನು ಹೇಳುವುದೇನೆಂದರೆ, 150 ಬೆಡ್ ಹೊಂದಿರತಕ್ಕಂಥ ಆಸ್ಪತ್ರೆಗೆ 18 ಜನ ವೈದ್ಯರು ಇರಬೇಕು. 18 ಜನರು ವೈದ್ಯರು ಇರುವಂಥ ಕಡೆ ಮಂಜೂರಾತಿ ಇರತಕ್ಕಂಥದ್ದು ಕೇವಲ 8 ಮಾತ್ರ. ಇನ್ನೂ 10 ವೈದ್ಯರ ಪೋಸ್ಟ್ ಖಾಲಿ ಇದೆ. ನಮಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಟ್ಟರೂ ಪರವಾಗಿಲ್ಲ. ಆದರೆ, ಮಂಜೂರಾತಿ ಮಾಡದೇ ಇರತಕ್ಕಂಥ ಪ್ರಶ್ನೆ ಇಲ್ಲಿ ಉದ್ಭವವಾಗಿರುವುದರಿಂದ ನೀವು 18 ಜನರನ್ನು ನೇಮಕ ಮಾಡಿಕೊಳ್ಳುವುದಕ್ಕೆ ನೀವು ಬದ್ಧರಾಗಿದ್ದೀರಾ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಮೇಲ್ದರ್ಜೆಗೇರಿಸಿರುವುದರಿಂದ ಹಂತ ಹಂತವಾಗಿ ತುಂಬಿಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅಂದರೆ ಎಲ್ಲಾ ಹುದ್ದೆಗಳನ್ನು ತುಂಬಿಕೊಳ್ಳುತ್ತೇವೆಂದು ಅವರಿಗೆ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ 50 ಬೆಡ್ ಇರುವ ಕಡೆ 100 ಬೆಡ್‌ಗೆ ಮತ್ತು 100 ಬೆಡ್ ಇರುವಂಥ ಕಡೆ 150 ಬೆಡ್ ಮಾಡಿ ಕೆಲವು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿದ್ದಾರೆ. ಹಿಂದೆ ವಿಶ್ವಬ್ಯಾಂಕ್ ನೆರವಿನಿಂದ ಒಳ್ಳೆಯ ಕಟ್ಟಡಗಳನ್ನು ಕಟ್ಟಿ ಆಪರೇಷನ್ ಥಿಯೇಟರ್ ಮಾಡಿದ್ದರೂ ಕೂಡ ಇವತ್ತಿನ ದಿವಸ ಅಂಥ ಕಡೆ ಅರವಳಿಕೆ ತಜ್ಞರು ಇಲ್ಲ ಮತ್ತೆ ಜನರಲ್ ಮೆಡಿಸನ್ ಇಲ್ಲ. ಯಾರಾದರೂ ಅರವಳಿಕೆ ತಜ್ಞರು ಆಸ್ಪತ್ರೆಗಳ ಹತ್ತಿರ ಇದ್ದು, ಒಬ್ಬ ಪೇಸೆಂಟ್‌ಗೆ ಆಪರೇಷನ್ ಮಾಡಿದರೆ 800 ರೂಪಾಯಿ ಕೊಡುತ್ತೇವೆಂದು ಮೊನ್ನೆ ದಿವಸ ಮಾನ್ಯ ಅಶೋಕ್‌ರವರು ಹೇಳಿದ್ದಾರೆ. ಆದ್ದರಿಂದ, ಈ ರೀತಿಯಾದ ಒಂದು ವ್ಯವಸ್ಥೆಯನ್ನು ಬೇಗ ಮಾಡಬೇಕು. ಏಕೆಂದರೆ ವಿಶ್ವಬ್ಯಾಂಕ್ ನೆರವಿನಿಂದ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚು ಮಾಡಿ ಅಲ್ಲಿ ವೈದ್ಯರು ಇಲ್ಲದೇ ಇದ್ದರೆ ಅಲ್ಲಿರತಕ್ಕಂಥ ಆಸ್ಪತ್ರೆಗಳು ಏನೂ ಉಪಯೋಗಕ್ಕೆ ಬರುವುದಿಲ್ಲ. ಮತ್ತೆ ಜಾಗಗಳು ಇಲ್ಲವೆಂದು ಅವರು ಹೇಳಿದರು. ನನ್ನ ಕ್ಷೇತ್ರದಲ್ಲಿ ಈಗಾಗಲೇ 15 ಜಾಗಗಳನ್ನು ಕೊಟ್ಟಿದ್ದೇವೆ. ಇದು ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಸೇರಲಿಲ್ಲ. ಅಂದರೆ, ದಾದಿಯರ ಉಪ ಕೇಂದ್ರಗಳ ಪ್ರಾರಂಭ ಮಾಡತಕ್ಕಂಥದ್ದು ಇದರಲ್ಲಿ ಸೇರಿಲ್ಲ. ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳಲ್ಲಿ ಇದರ ಅವಶ್ಯಕತೆ ಬಹಳ ಇದೆ. ಮಾನ್ಯ ಬಾಲ್‌ರಾಜ್‌ರವರು ಕೇವಲ ಕೊಳ್ಳೇಗಾಲಕ್ಕೆ ಅಲ್ಲ. ಆದರೆ ಇಡೀ ರಾಜ್ಯದಲ್ಲಿ ಈ ಒಂದು ಪರಿಸ್ಥಿತಿ ಇದೆ. ಈ ಪರಿಸ್ಥಿತಿಯನ್ನು ಆದಷ್ಟು ಬೇಗ ವ್ಯವಸ್ಥಿತಗೊಳಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಅರವಳಿಕೆ ತಜ್ಞರ ಕೊರತೆ ಇದೆ. ಖಾಸಗಿಯ ವೈದ್ಯರು ಆಪರೇಷನ್ ಸಂದರ್ಭದಲ್ಲಿ ನಮ್ಮ ಆಸ್ಪತ್ರೆಗಳಿಗೆ ಬಂದಾಗ ಅವರಿಗೆ 800 ರೂಪಾಯಿ ಕೊಡಬೇಕೆಂದು ಆದೇಶ ಕೂಡ ಮಾಡಿದ್ದೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : 800 ರೂಪಾಯಿ ಸಾಕಾಗುವುದಿಲ್ಲ. 1000 ರೂಪಾಯಿ–ಗಳಾದರೂ ಕೊಡುವಂತೆ ಆದೇಶ ಮಾಡಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ. ಮಧ್ಯದಲ್ಲಿ ನೀವು ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ನಮ್ಮ ಆಸ್ಪತ್ರೆಗಳಲ್ಲಿ ಕಳೆದ 5 ವರ್ಷಗಳಿಂದ ಸುಮಾರು 325 ಜನ ವೈದ್ಯರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಮಾರ್ಚ್ ಮೊದಲನೇ ವಾರದಲ್ಲಿ ಈ ಎಲ್ಲಾ ಗುತ್ತಿಗೆ ವೈದ್ಯರುಗಳನ್ನು ನೇಮಕ ಮಾಡುವುದಕ್ಕೆ ಈಗಾಗಲೇ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿಯಾಗಿ ಟೆಕ್ನಿಷಿಯನ್ಸ್, ಡ್ರೈವರ್ಸ್ ಎಕ್ಸ್‌ರೇ ಟೆಕ್ನಿಷಿಯನ್ಸ್ ಈ ರೀತಿಯಾಗಿ ಸುಮಾರು 1236 ಜನರು 5 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರುಗಳನ್ನೂ ಸಹ ಕನ್‌ಫರ್ಮ್ ಮಾಡುವುದಕ್ಕೆ ಈ ಮಾರ್ಚ್ ತಿಂಗಳೊಳಗಾಗಿ ಆದೇಶವನ್ನು ಹೊರಡಿಸುತ್ತಿದ್ದೇವೆ.

ಶ್ರೀ ಜಿ.ಎಸ್. ಗಡ್ಡದೇವರಮಠ್ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಈಗ ಆ ಪ್ರಶ್ನೆ ಮುಕ್ತಾಯವಾಗಿದೆ. ಒಂದು ಪ್ರಶ್ನೆಗೆ ಎಷ್ಟು ಹೊತ್ತು ಸಮಯ ಕೊಡುವುದು? ಮಾನ್ಯ ಆರೋಗ್ಯ ಸಚಿವರೆ, ಮಾನ್ಯ ಗಡ್ಡದೇವರಮಠ್‌ರವರು ಏನೋ ಹೇಳುತ್ತಿದ್ದಾರೆ ದಯವಿಟ್ಟು ಕೇಳಿ.

ಶ್ರೀ ಜಿ.ಎಸ್. ಗಡ್ಡದೇವರಮಠ್ : ಮಾನ್ಯ ಮಂತ್ರಿಗಳು ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೀರಿ. ಆದರೆ ಇದು ಏನಾಗಿದೆ ಎಂದರೆ ಕೇವಲ ನೆವಕ್ಕೆ ಮಾತ್ರ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ಕೆಲಸ ಆಗುತ್ತಿದೆ. ಭರ್ತಿ ಮಾಡಿದಾಗ ಒಂದು ಕಡೆ ಪೋಸ್ಟ್ ತೋರಿಸುತ್ತಾರೆ. ಆದರೆ ಅವರು ಅಲ್ಲಿಗೆ ಬರದೆ ಬೇರೆ ಕಡೆಗೆ ಡೆಪ್ಯುಟೇಷನ್ ಮೇಲೆ ಹೊರಟು ಹೋಗುತ್ತಾರೆ. ನಿಮ್ಮ ಇಲಾಖೆಗೆ ಬಂದು ಅಧಿಕಾರಿಗಳನ್ನು ಕೇಳಿದರೆ ಅಲ್ಲಿ ಈಗಾಗಲೇ ಪೋಸ್ಟ್ ಭರ್ತಿಯಾಗಿದೆ ಎಂದು ನಮಗೆ ಉತ್ತರ ಹೇಳುತ್ತಾರೆ. ಆದರೆ ಅಲ್ಲಿ ಆ ಪೋಸ್ಟ್ ಖಾಲಿ ಇರುತ್ತದೆ. ವೈದ್ಯಾಧಿಕಾರಿಗಳು ಅಲ್ಲಿ ಇರುವುದೇ ಇಲ್ಲ. ಆದ್ದರಿಂದ ನಿಮ್ಮ ಆರೋಗ್ಯ ಇಲಾಖೆಯಿಂದ ಡೆಪ್ಯುಟೇಷನ್‌ನ್ನು ಪೂರ್ತಿಯಾಗಿ ತೆಗೆದರೆ ಒಳ್ಳೆಯದು ಆಗುತ್ತದೆಂಬುದು ನಮ್ಮ ಭಾವನೆ. ಏಕೆಂದರೆ ನನ್ನ ಕ್ಷೇತ್ರದೊಳಗಡೆ 4-6 ಮಂದಿ ಡಾಕ್ಟರ್‌ಗಳಿಗೆ ನೆವಕ್ಕೆ ಅಲ್ಲಿ ಹುದ್ದೆಯನ್ನು ತೋರಿಸಿದ್ದಾರೆ. ಅವರು ಡೆಪ್ಯುಟೇಷನ್ ಮೇಲೆ ಹೋಗಿ ಎಲ್ಲೆಲ್ಲೋ ಕೆಲಸವನ್ನು ಮಾಡುತ್ತಿದ್ದಾರೆ. ಇಲ್ಲಿ ಇಲಾಖೆಯ ಅಧಿಕಾರಿಗಳನ್ನು ಬಂದು ಕೇಳಿದರೆ ನಿಮ್ಮಲ್ಲಿ ಯಾವ ಪೋಸ್ಟ್‌ಗಳೂ ವೇಕೆಂಟ್ ಇಲ್ಲ ಎಂದು ಹೇಳುತ್ತಾರೆ. ಇದೇನು ಅನಾಹುತ? ನಾವು ಯಾರನ್ನು ಕೇಳುವುದು?

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಇನ್ನೊಂದು ಸಣ್ಣ ವಿಷಯ, ಏಕೆಂದರೆ, ಆರೋಗ್ಯ ಇಲಾಖೆ.....

ಅಧ್ಯಕ್ಷರು : ಎಲ್ಲರೂ ಹೀಗೆ ಎದ್ದು ನಿಂತುಕೊಂಡು ಈ ರೀತಿ ಮಾತನಾಡಿದರೆ ಹೇಗೆ? ಅವರು ಕೊಳ್ಳೇಗಾಲಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ. ನೀವೆಲ್ಲರೂ ಎದ್ದು ನಿಂತುಕೊಂಡು ಕೇಳಿದರೆ ಹೇಗೆ ಉತ್ತರವನ್ನು ಕೊಡುತ್ತಾರೆ? ಅದನ್ನು ಕ್ಲೋಸ್ ಮಾಡಿದ್ದೇನೆ. ಮಾನ್ಯ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್ ಖಾನ್ ಸದನದಲ್ಲಿ ಇಲ್ಲ. ಮಾನ್ಯ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾರವರೇ, ಪ್ರಶ್ನೆ ಕೇಳಿ.